ಸುಮಾರು 104 ಕೋಟಿ ರೂಪಾಯಿಗಳನ್ನು ಒಂದು ನಗರಕ್ಕೆ ಕೊಟ್ಟಿದ್ದಾರೆ. ಈ ಹಣವನ್ನು 3-4 ವರ್ಷಗಳಲ್ಲಿ ಕೊಡುತ್ತಾರೆ. ಒಂದೇ ವರ್ಷದಲ್ಲಿ ಕೊಡುವುದಲ್ಲ. 7ನೇ ಪಂಚವಾರ್ಷಿಕ ಯೋಜನೆಯಲ್ಲಿ 27 ಪಟ್ಟಣ ಪ್ರದೇಶಗಳನ್ನು ತೆಗೆದುಕೊಂಡಿದ್ದೇವೆ. 8ನೇ ಪಂಚವಾರ್ಷಿಕ ಯೋಜನೆಗೆ 67 ಪಟ್ಟಣಗಳನ್ನು ತೆಗೆದುಕೊಳ್ಳುವುದಕ್ಕೆ ಸೇರಿಸಿ ಈಗಾಗಲೇ ಕಳುಹಿಸಿಕೊಟ್ಟಿದ್ದೇವೆ. ಇದರಲ್ಲಿ ಎಲ್ಲ 67 ಪಟ್ಟಣಗಳನ್ನು ಕೇಂದ್ರ ಸರ್ಕಾರದವರು ತೆಗೆದುಕೊಳ್ಳುವುದಿಲ್ಲ, ಯಾವ ಯಾವ ಪಟ್ಟಣ ಎಂದು ಅವರು ಆಯ್ಕೆ ಮಾಡುತ್ತಾರೆ. ಅದರ ಪ್ರಕಾರ ನಾವು ತೆಗೆದುಕೊಳ್ಳುತ್ತೇವೆ. ಆಯ್ಕೆಯಾದ ಮೇಲೆ ಟೌನ್ ಪ್ಲಾನಿಂಗ್ ಡೆವಲಪ್‌ಮೆಂಟ್‌ನವರು ಡೆವಲಪ್‌ಮೆಂಟ್ ವಿಚಾರದಲ್ಲಿ ಸ್ಕೀಮ್ ತಯಾರು ಮಾಡಿ ಅದರಲ್ಲಿ ಹಣ ವಿರ್ಚು ಮಾಡಿ ಡೆವಲಪ್‌ಮೆಂಟ್ ಮಾಡುತ್ತಾರೆ.

ಶ್ರೀ ಹೆಚ್. ವಿಶ್ವನಾಥ್:- ಈ ಸಾರಿ ನಮ್ಮ ಕೆ.ಆರ್. ಪೇಟೆ ಟೌನ್ ಅನ್ನು ದಯಮಾಡಿ ತೆಗೆದುಕೊಳ್ಳುತ್ತೀರಾ?

ಶ್ರೀ ಕೆ.ಜೆ. ಜಾರ್ಜ್:- ಮಾನ್ಯ ಅಧ್ಯಕ್ಷರೆ, ಆ 67ರಲ್ಲಿ ಕೆ.ಆರ್. ನಗರ ಪಟ್ಟಣವನ್ನು ಸಮೇತ ಕಳುಹಿಸಿದ್ದೇವೆ. ಆದರೆ ಅದು ಒಂದು ಪ್ರಯಾರಿಟಿ ಪ್ರಕಾರ 44ನೇ ಸ್ಥಾನದಲ್ಲಿ ಇದೆ. ಕೆಲವೊಂದು ಪ್ಯಾರಾಮೀಟರ್ಸ್ ಪ್ರಕಾರ 44ನೇ ಸ್ಥಾನದಲ್ಲಿದೆ. ಕೇಂದ್ರ ಸರ್ಕಾರ ಅದನ್ನು ಆಯ್ಕೆ ಮಾಡಬೇಕಾಗಿದೆ.

ಅಧ್ಯಕ್ಷರು:- 21ನೇ ಶತಮಾನದಲ್ಲಿ ಎದುರು ನೋಡುಬಹುದು ವಿಶ್ವನಾಥ್‌ರವರೇ.

ಕೋಮುಗಲಭೆಯಲ್ಲಿ ಸತ್ತವರ ಕುಟುಂಬಗಳಿಗೆ ಉದ್ಯೋಗ

28(278). ಶ್ರೀ ಸಾದತ್ ಅಲಿ ಖಾನ್, (ಚನ್ನ ಪಟ್ಟಣ):- ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಮು ಗಲಭೆಯಲ್ಲಿ ಸತ್ತವರ ಕುಟುಂಬಕ್ಕೆ ಅನುಕಂಪದ ಆಧಾರದ ಮೇಲೆ ಸರ್ಕಾರಿ ಉದ್ಯೋಗ ಕೊಡುವ ವಿಷಯವು ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ, ಈ ವಿಷಯವು ಕಳೆದ ಎರಡು ವರ್ಷಗಳಿಂದ ಬಾಕಿ ಇರಲು ಕಾರಣಗಳೇನು?

ಇ) ಇನ್ನೆಷ್ಟು ಸಮಯದಲ್ಲಿ ಆ ಸಂತ್ರಸ್ತ ಕುಟುಂಬದವರಿಗೆ ಸರ್ಕಾರೀ ಉದ್ಯೋಗ ಕೊಡಲಾಗುವುದು?

ಶ್ರೀ ಧರ್ಮ ಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು):-

ಅ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿ ಇದೆ.

ಆ) ಈ ವಿಷಯಕ್ಕೆ ಸಂಬಂಧಪಟ್ಟ ನಿಯಮಗಳನ್ನು ರಚಿಸಬೇಕಾಗಿದ್ದು, ಸದರಿ ನಿಯಮಗಳನ್ನು ಕಾನೂನು ಇಲಾಖೆ ಹಾಗೂ ಸಿಬ್ಬಂಧಿ ಮತ್ತು ಆಡಳಿತ ಸುಧಾರಣಾ ಇಲಾಖೆಗಳ ಪರಿಶೀಲನೆಯಲ್ಲಿ ಇದೆ.

ಶ್ರೀ ಸಾದತ್ ಅಲಿ ಖಾನ್:- ಮಾನ್ಯ ಅಧ್ಯಕ್ಷರೆ, ಈ ಕ್ವಶ್ಚನ್ ಅಸೆಂಬ್ಲಿಯಲ್ಲಿ ಮೂರನೇ ಸಲ ಬರುತ್ತಿದೆ. ಕರ್ನಾಟಕದಲ್ಲಿ ಕಮ್ಯುನಲ್ ಡಿಸ್ಟರ್‌ಬೆನ್ಸಸ್‌ನಲ್ಲಿ 1990ನೇ ಸಾಲಿನಲ್ಲಿ ಸೆಪ್ಟಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ 75 ಜನ ಸತ್ತರು. ಅಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ವೀರೇಂದ್ರ ಪಾಟೀಲರು ಸೆಪ್ಟಂಬರ್‌ನಲ್ಲಿ ರಾಮನಗರಕ್ಕೆ ಬಂದಿದ್ದರು. ಆಗ ನಾನೂ ಅವರ ಜೊತೆಯಲ್ಲಿ ಹೋಗಿದ್ದೆ. ಆಗ ಅವರು ಅನೌನ್ಸ್ ಮಾಡಿದರು. ತಕ್ಷಣ ಒಂದು ಫ್ಯಾಮಿಲಿ ಮೆಂಬರ್‌ಗೆ ಒಂದು ಕೆಲಸ ಕೊಡುತ್ತೇವೆಂದು ಅನೌನ್ಸ್ ಮಾಡಿದರು. ಮತ್ತೆ ಅಕ್ಟೋಬರ್‌ನಲ್ಲಿ ಚನ್ನರಾಯಟ್ಟಣದಲ್ಲಿ, ಬಾಕಿ ಕಡೆ ಎಲ್ಲಾ ಕಮ್ಯುನಲ್ ಡಿಸ್ಟರ್‌ಬೆನ್ಸಸ್ ಆಯಿತು. ಆಗ ಪ್ರಜೆಂಟ್ ಚೀಫ್ ಮಿನಿಸ್ಟರ್ ಎಲ್ಲಾ ಕಡೆ ಹೋಗಿದ್ದಾರೆ. ಎಲ್ಲಾ ಕಡೆ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಒಂದು ಫ್ಯಾಮಿಲಿಗೆ ಒಂದು ಉದ್ಯೋಗ ಕೊಡುತ್ತೇವೆಂದು ಹೇಳಿದ್ದಾರೆ.

But every time the matter is under consideration ಎಂದು ಉತ್ತರ ಬರುತ್ತದೆ. ಇದು ಯಾವಾಗ ಆಗುತ್ತದೆ? ಅದಕ್ಕೆ ನನ್ನ ಪ್ರಾಬ್ಲಮ್ ಏನೆಂದರೆ, ಎಲ್ಲಾ ಕಡೆ ಮುಖ್ಯಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದಾರೆ. ನಾವು ಎಲ್ಲಿ ಫಂಕ್ಷನ್ಸ್‌ಗೆ ಹೋಗಲಿ ಎಲ್ಲಿ ಹೊದರೂ ಅಲ್ಲಿ ಫ್ಯಾಮಿಲಿಯವರು ಬಂದು ಕೇಳುತ್ತಾರೆ. It has become a problem for me to answer them.

Last time you have answered that this has gone to the department of Personnel and Administrative Reforms, then it has again gone to the Law Department for amendment. ಕೋಮು ಗಲಭೆಯಲ್ಲಿ ಯಾರು ಸತ್ತು ಹೋಗಿದ್ದಾರೆ ಆ ಫ್ಯಾಮಿಲೀಸ್‌ನಲ್ಲಿ there are some graduates ಬಿ.ಇ. ಆದವರು ಇದ್ದಾರೆ, ಬಿ.ಎ. ಆದವರು ಇದ್ದಾರೆ. Even some are uneducated. Therefore, when are you going to give them appointments? I want some definite assurance.

ಶ್ರೀ ಧರ್ಮಸಿಂಗ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಸಾದತ್ ಅಲಿ ಖಾನ್‌ರವರು ಹೇಳಿದ ಹಾಗೆ ಶ್ರೀಮಾನ್ ವೀರೇಂದ್ರ ಪಾಟೀಲರು ಮುಖ್ಯ ಮಂತ್ರಿ ಇದ್ದಾಗ, ಆ ಭಾಗಕ್ಕೆ ಹೋದಾಗ ಯಾರು ಯಾರ ಫ್ಯಾಮಿಲಿಗಳಲ್ಲಿ ಜೀವಗಳನ್ನು ಕಳೆದುಕೊಂಡಿದ್ದಾರೋ ಅವರಿಗೆ ಒಂದು ನೌಕರಿ ಕೊಡತಕ್ಕಂಥ ವಾಗ್ದಾನ ಮಾಡಿದ್ದಾರೆ. ಮತ್ತು ಈಗಿನ ಮುಖ್ಯ ಮಂತ್ರಿಗಳೂ ಹೇಳಿದ್ದಾರೆ. ನಾನೂ ಕೂಡ ಚನ್ನಪಟ್ಟಣಕ್ಕೆ ಬಂದಾಗ ಹೇಳಿದ್ದೇನೆ. ಆದರೆ ಅದರಲ್ಲಿ ಫಾಲೋ ಅಪ್ ಆಗುತ್ತಿದೆ. Already Government has constituted a Cabinet sub–Committee. ಇದರಲ್ಲಿ ಎಕ್ಸಿಸ್ಟಿಂಗ್ ರೂಲ್‌ನಲ್ಲಿ ತಿದ್ದುಪಡಿ ಮಾಡಬೇಕಾಗಿದೆ. ತಿದ್ದುಪಡಿ ಮಾಡಿ ಲಾ ಡಿಪಾರ್ಟ್‌ಮೆಂಟ್‌ಗೆ ಹೋಗಿ ಬಂದಿದೆ. ನಂತರ ಕ್ಯಾಬಿನೆಟ್‌ಗೆ ಬರುತ್ತದೆ. ಕ್ಯಾಬಿನೆಟ್‌ನಲ್ಲಿ ಅಪ್ರೂವ್ ಮಾಡಿ definitely we are going to give relief to them. ಆದರಲ್ಲಿ ಗೌರ್ನಮೆಂಟ್ ಕಮಿಟ್‌ಮೆಂಟ್ ಇದೆ. ಆದರಲ್ಲಿ ಹಿಂಬೆ ಇರತಕ್ಕಂಥಾದ್ದು ಇಲ್ಲ, ಇರತಕ್ಕಂಥ ಎಕ್ಸಿಸ್ಟಿಂಗ್ ರೂಲ್‌ನಲ್ಲಿ ಸ್ವಲ್ಪ ಅಮೆಂಡ್‌ಮೆಂಟ್ ಮಾಡಬೇಕಾಗುತ್ತದೆ. ಅಮೆಂಡ್‌ಮೆಂಟ್ ಸಲುವಾಗಿ ಸ್ವಲ್ಪ ತಡವಾಗಿದೆಯೇ ಹೊರತಾಗಿ ಬೇರೆ ಏನೂ ಕಾರಣ ಇಲ್ಲ.

ಶ್ರೀ ಸಾದತ್ ಅಲಿ ಖಾನ್:- ಸನ್ಮಾನ್ಯ ಅಧ್ಯಕ್ಷರೆ, ಇದಾಗಿ 18 ಮಂತ್ಸ್ ಆಗಿದೆ. ಯಾವಾಗ ಮಾಡುತ್ತೀರಿ?

ಶ್ರೀ ಧರ್ಮಸಿಂಗ್:- ರಾ ಸ್ಟೇಜ್‌ನಲ್ಲಿದೆ. ಕ್ಯಾಬಿನೆಟ್‌ಗೆ ಬರುತ್ತದೆ. ಕ್ಯಾಬಿನೆಟ್‌ನಲ್ಲಿ ಅಪ್ರೂವಲ್ ಕೊಡಬೇಕಾಗುತ್ತದೆ. ಆಲ್‌ರೆಡಿ ಲಾ ಡಿಪಾರ್ಟ್‌ಮೆಂಟ್‌ನಿಂದ ಪ್ರೊಸೆಸ್ ಆಗಿ ಬಂದಿದೆ.

ಶ್ರೀ ಕೆ.ಎಸ್. ಈಶ್ವರಪ್ಪ:- ಸನ್ಮಾನ್ಯ ಅಧ್ಯಕ್ಷರೆ, ಈ ಕೋಮು ಗಲಭೆಗಳಲ್ಲಿ ಜೀವ ಕಳೆದುಕೊಂಡಿರುವ ಕುಟುಂಬದವರ ಪರಿಸ್ಥಿತಿ ನೋಡಿದರೆ ಅವರು ನಿರ್ಗತಿಕರಾಗುವ ಸ್ಥಿತಿಗೆ ಬಂದಿದೆ. ಅದಕ್ಕೋಸ್ಕರ ಈ ಒಂದು ತಿದ್ದುಪಡಿ ತರುವ ಸಂದರ್ಭದಲ್ಲಿ ಕೋಮು ಗಲಭೆಗಳಲ್ಲಿ ಜೀವ ಕಳೆದುಕೊಂಡವರ ಕುಟುಂಬದವರಿಗೆ 3 ದಿವಸಗಳೊಳಗೆ ನೌಕರಿ ಕೊಡಿಸುವಂಥ ವ್ಯವಸ್ಥೆ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆಯೇ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಧರ್ಮಸಿಂಗ್:- ಇನ್ನು ಮುಂದೆ ಈ ರೀತಿ ಮಾಡಬೇಕೆಂದು ಏಕೆ ಹೇಳುತ್ತೀರಿ? ಕರ್ನಾಟಕ ರಾಜ್ಯದಲ್ಲಿ ಇದು ಆಗಲೇ ಬಾರದು ಇದರ ಬಗ್ಗೆ ಒಂದು ರೂಲ್ಸ್ ಫ್ರೇಮ್ ಆದಮೇಲೆ ಮುಂದೆ ಇಮ್ಮಿಡಿಯಟ್‌ಲಿ ಆಗುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ:- ಇವತ್ತಿನತನಕ ಆಗಿರುವವರ ಗತಿ ಏನು? ನನ್ನ ಆಸೆ ಏನೆಂದರೆ, ಖಂಡಿತ ಕೋಮು ಗಲಭೆಯಲ್ಲಿ ಸತ್ತವರ ಕುಟುಂಬಕ್ಕೆ ಇನ್ನು ಮುಂದೆ ಕೆಲಸ ಕೊಡಬೇಕು. ಕರ್ನಾಟಕ ರಾಜ್ಯದಲ್ಲಿ ಕೋಮು ಗಲಭೆ ಆಗಬಾರದು. ಅಂಥಾ ಸ್ಥಿತಿ ಬರಲೇಬಾರದು. ಇವತ್ತಿನ ತನಕ ಆಗಿರುವವರಿಗೆ ಇನ್ನು 3 ದಿವಸಗಳೊಳಗೆ ಒಂದು ಪರಿಹಾರ ಮಾಡುವುದಕ್ಕೆ ಏನಾದರೂ ಪ್ರಯತ್ನ ಮಾಡುತ್ತೀರಾ?

ಅಧ್ಯಕ್ಷರು:- ಕೋಮು ಗಲಭೆ ಆಗದೇ ಇರುವುದಕ್ಕೆ ನೀವೂ ಸಹಕಾರ ಮಾಡುತ್ತೀರಲ್ಲಾ? ನಾವೂ ನೀವು ಎಲ್ಲಾ ಸಹಕಾರ ಮಾಡುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ:- ಈ ದೇಶನಲ್ಲಿರುವವರೆಲ್ಲಾ ಸಹಕಾರ ಮಾಡಬೇಕು, ಸರ್.

ಅಧ್ಯಕ್ಷರು:- ಸೋ, 1990ನೇ ಇಸವಿಯಲ್ಲಿ ನಡೆದಂಥ ಕೋಮುಗಲಭೆಗಳಿಗೆ ಒಂದು ಕ್ಯಾಬಿನೆಟ್ ಸಬ್ ಕಮಿಟಿ ಮಾಡಿದ್ದೇವೆ. ಆ ಕ್ಯಾಬಿನೆಟ್ ಸಬ್ ಕಮಿಟಿ ಅಪ್ರೂವ್ ಮಾಡುವ ಸ್ಟೇಜ್‌ನಲ್ಲಿ ಇದೆಯೆಂದು 18 ತಿಂಗಳಾದ ಮೇಲೆ ಫೈನಲ್ ಶೇಪ್ ತೆಗೆದುಕೊಳ್ಳುತ್ತಿದ್ದೇವೆಂದು ಹೇಳಿದ್ದಾರೆ. You will be satisfied with that. Atleast after 18 months it is taking shape.

ಶ್ರೀ ಕೆ.ಎಸ್. ಈಶ್ವರಪ್ಪ:- ನನ್ನ ಶಿವಮೊಗ್ಗ ಕ್ಷೇತ್ರದಲ್ಲಿ ಚುನಾವಣೆಗಿಂತ ಮುಂಚಿತವಾಗಿ ನಡೆದ ಗಲಭೆಯಲ್ಲಿ ಒಬ್ಬ ವ್ಯಕ್ತಿ ವಿಧವೆಯಾಗಿದ್ದಾರೆ. ನಮ್ಮ ಜಿಲ್ಲಾಧಿಕಾರಿಗಳು, ಅವರಿಗೆ ಒಂದು ಡೇಲಿ ವೇಜಸ್ ಮೇಲೆ ಕೆಲಸ ಕೊಡಿಸುವುದಕ್ಕೆ ಪ್ರಯತ್ನ ಮಾಡಿದರು.

MR. SPEAKER:- I think Government should take up such questions. To appoint persons on Daily wages there should not be difficulty to instruct the Deputy Commissioners under Rozgar and other Schemes. I think you should do immediately.

ಶ್ರೀ ಕೆ.ಎಸ್. ಈಶ್ವರಪ್ಪ:- ಇವತ್ತಿನವರೆಗೂ ಕೇಳಿದ್ದೇನೆ, ಇನ್ನೂ ಆಗಿಲ್ಲ.

ಅಧ್ಯಕ್ಷರು:- ಶ್ರೀ ವಾಟಾಳ್ ನಾಗರಾಜ್, ಏನು ಶಿವರಾತ್ರಿಯನ್ನು ಇನ್ನೂ ಆಚರಿಸುತ್ತಲೇ ಇದ್ದಾರೋ ಅವನು?

ಶ್ರೀ ಬಸವರಾಜ ರಾಯರೆಡ್ಡಿ:- ಅವರು ವಾಟಾಳ್ ಮಠಕ್ಕೆ ಹೋಗಿದ್ದಾರೆ ಸರ್. ವಾಟಾಳ್‌ನಲ್ಲಿ ಒಂದು ಮಠ ಆಗಿದೆ ಅವರು ವಾಟಾಳ್ ಮಠದಲ್ಲಿ ಆಚರಣೆ ಮಾಡಿತ್ತಿದ್ದಾರೆ.

ಕೆ.ಎಸ್.ಆರ್.ಪಿ.ಗೆ ಸೌಲಭ್ಯಗಳು.

36 (7). ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ):- ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಮೀಸಲು ಪಡೆಯನ್ನು ಕೇಂದ್ರ ಸ್ಥಾನದಿಂದ ರಾಜ್ಯದ ಇತರ ಕಡೆಗೆ ನಿಯೋಜಿಸಿದ್ದಾಗ ಅವರು 24 ಗಂಟೆಗಳ ಕಾಲ ಸೇವೆ ಸಲ್ಲಿಸಬೇಕಾಗಿರುವುದು ನಿಜವೆ?

ಆ) ಹಾಗಿದ್ದಲ್ಲಿ ಇವರಿಗೆ ವಾರದ ರಜೆ ಮತ್ತು ಎಂಟು ಗಂಟೆಗಳ ಕಾಲ ಮಾತ್ರದ ಸೇವೆಯಿಂದ ವಂಚನೆ ಮಾಡಿದಂತಾಗಿಲ್ಲವೆ?

ಇ) ಹಾಗಿದ್ದಲ್ಲಿ ರಾಜ್ಯ ಇತರ ಸಿಬ್ಬಂದಿಗೆ ಸಿಗುವ ಸಂಬಳಗಳನ್ನು ಇವರಿಗೂ ವಿಸ್ತರಿಸಲಾಗುವುದೆ?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು.):-

ಅ) ಇಲ್ಲ, ಆದಾಗ್ಯೂ ಪರಿಸ್ಥಿತಿಯ ಒತ್ತಡದಲ್ಲಿ ಸಾರ್ವಜನಿಕ ಹಿತದೃಷ್ಟಿಯ ಸಲುವಾಗಿ ಸ್ಥಳೀಯ ಪೋಲೀಸ್ ಸಿಬ್ಬಂದಿಯೊಂದಿಗೆ ಹೆಚ್ಚು ಗಂಟೆಗಳ ಕಾಲ ಕೆಲಸ ಮಾಡುವುದು ಕೆಲವು ಬಾರಿ ಅನಿರ್ವಾರ್ಯವಾಗುತ್ತದೆ.

ಆ) ಉದ್ಭವಿಸುವುದಿಲ್ಲ.

ಇ) ರಾಜ್ಯ ಪೋಲೀಸ್ ಸಿಬ್ಬಂದಿಗೆ ನೀಡಲಾಗುತ್ತಿರುವ ವೇತನ ಮತ್ತು ಭತ್ಯೆಗಳನ್ನು ಕೆ.ಎಸ್.ಆರ್.ಪಿ. ಪಡೆಯವರಿಗೂ ಸಹ ನೀಡಲಾಗುತ್ತಿದೆ.

ಶ್ರೀ ಹೆಚ್.ಎಂ. ರೇವಣ್ಣ:- ಸನ್ಮಾನ್ಯ ಸಭಾಧ್ಯಕ್ಷರೆ, ಮೀಸಲು ಪಡೆಯ ಪೋಲೀಸ್ ವರ್ಗದವರು ಬಹಳ ಕೆಲಸ ಮಾಡುತ್ತಿದ್ದಾರೆ. ನಿಯೋಜಿತ ವೇಳೆಗಿಂತ ಹೆಚ್ಚಿನ ಕೆಲಸ ಮಾಡಿದಾಗ ಮತ್ತು ಬೇರೆ ಸ್ಥಳಕ್ಕೆ ಅವರನ್ನು ಕಳುಹಿಸಿಕೊಟ್ಟಾಗ ಅವರಿಗೆ ಹೆಚ್ಚಿನ ಭತ್ಯೆಯನ್ನು ಕೊಡಬೇಕೆಂದು ಕೇಳಿದ್ದೇನೆ. ಅದಕ್ಕೆ, ಸಾಧ್ಯವಿಲ್ಲ, ಅವರಿಗೆ ಕೊಡುತ್ತಿರುವಂಥ ಸಂಬಳವೇ ಜಾಸ್ತಿಯಾಗಿದೆ ಎಂದು ಗೃಹ ಸಚಿವರು ಹೇಳಿದ್ದಾರೆ. ಆದರೆ, ಪೋಲೀಸ್ ಇಲಾಖೆಗಿಂತ ಅವರಿಗೆ ಸ್ವಲ್ಪ ಹೆಚ್ಚು ಕೊಡಬೇಕೆಂದು ನಾನು ಕೇಳುತ್ತಿದ್ದೇನೆ.

ಶ್ರೀ ಧರ್ಮಸಿಂಗ್:- ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರಿಗೆ ತಿಳಿಸಬಯಸುವುದೇನೆಂದರೆ, ಎಲ್ಲಾ ಕಡೆ ಅಂದರೆ, ಕೆಎಸ್ಆರ್‌ಪಿ ಆಗಲಿ, ಪೋಲೀಸ್ ಡಿಪಾರ್ಟ್‌ಮೆಂಟ್ ಆಗಲಿ ಅವರಿಗ ಒಂದೇ ಭತ್ಯೆ ಕೊಡತಕ್ಕಂಥಾದ್ದು. ಕೆಎಸ್ಆರ್‌ಪಿಯವರಿಗೆ ಕಡಿಮೆ, ಮತ್ತೊಂದು ಕಡೆ ಹೆಚ್ಚು ಎನ್ನತಕ್ಕಂಥಾದ್ದು ಇಲ್ಲವೇ ಇಲ್ಲ. ನಮ್ಮಲ್ಲಿ ಈ ರೀತಿ ಇದೆ. ಬೆಂಗಳೂರು ನಗರದಲ್ಲಿ 12 ರೂಪಾಯಿ ಕೊಡುತ್ತಿದ್ದೇನೆ, ಹೊರಗಡೆ 10 ರೂಪಾಯಿ ಕೊಡುತ್ತಿದ್ದೇವೆ.